# ಜಯ ಪಾಂಡುರಂಗ ನಾ ನಿನ್ನ ಮನಕೆ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** The lyrics given in book mentioned in Ref. 1 (given in yellow highlights) are similar to that of the singer. The lyrics as per Ref. 2 are different and are given separately without highlights.

| | |
|---|---|
| ರಾಗ: ನಾದನಾಮಕ್ರಿಯೆ ತಾಳ: ಆದಿ | ರಾಗ: ನಾದನಾಮಕ್ರಿಯೆ ತಾಳ: ಆದಿ |
| ಜಯ ಪಾಂಡುರಂಗ ನಾ ನಿನ್ನ ಮನಕೆ ಬಾರೆನೆ ॥ ಪ ॥ | ಜಯ ಪಾಂಡುರಂಗ ನಾ ನಿನ್ನ ಮನಕೆ ಬಾರೆನೆ |
| ನಾ ನಿನ್ನ ಮನಕೆ ಬಾರೆನೆ ಬಂದರೆ ಈ ಭವದ<br>ಬಲೆಯೊಳು ಸಿಲುಕುವೆನೆ ಜಯ ಪಾಂಡುರಂಗ ॥ ಅಪ ॥ | ನಾ ನಿನ್ನ ಮನಕೆ ಬಾರೆನೆ ಬಂದರೆ ಈ ಭವದ<br>ಬಲೆಯೊಳು ಸಿಲುಕುವೆನೆ ಜಯ ಪಾಂಡುರಂಗ |
| ಕೆಟ್ಟ ಕಿರಾತಕನ ಬೆಟ್ಟದಂಥ ಪಾಪವ<br>ಸುಟ್ಟು ವಾಲ್ಮೀಕಿ ಎನಿಸಿದ್ಯೋ ॥ 1 ॥ | ಕೆಟ್ಟ ಕಿರಾತನ ಬೆಟ್ಟದಂಥ ಪಾಪವ<br>ಸುಟ್ಟು ವಾಲ್ಮೀಕಿ ಮುನಿಯೆನಿಸಿದೆ |
| ಅತಿ ಭ್ರಷ್ಟ ಅಜಾಮಿಳನ ಅಂತ್ಯ ಸಮಯದಲ್ಲಿ<br>ಅಂತಕನ ಬಾಧೆಯ ಬಿಡಿಸಿದ್ಯೋ ॥ 2 ॥ | ಅಂತ್ಯ ಸಮಯದಲ್ಲಿ ಅತಿ ಭ್ರಷ್ಟ ಅಜಾಮಿಳನ<br>ಅಂತಕನ ಬಾಧೆಯ ಬಿಡಿಸಿದೆಯೊ |
| ಅಂಬುಜ ನಾಭನೆ ಕುಬ್ಜೆ ಡೊಂಕನು ತಿದ್ದಿ<br>ಕುಶಲದಿಂದವಳ ಕೂಡಿದ್ಯೋ ॥ 3 ॥ | ತಂದೆ ತಾಯ್ಗಳನ್ನು ತೊರೆದ ಧ್ರುವನಿಗೆ<br>ಚೆಂದದಿಂದ ಮಾರ್ಗವ ತೋರಿದೆಯೊ |
| ಪ್ರೀತಿಯಿಂದಲಿ ಶಬರಿ ಉಂಡ ಎಂಜಲ ಮೆದ್ದು<br>ಮುಕುತಿ ಮಾರ್ಗವ ತೋರಿದ್ಯೋ ॥ 4 ॥ | ಪಂಕಜ ನಾಭನೆ ಕುಬುಜೆಯ ಡೊಂಕ ತಿದ್ದಿ<br>ಶಂಕೆಯಿಲ್ಲದೆ ಅವಳ ಕೂಡಿದೆಯೊ |
| ಐದು ಮಂದಿಯ ಕೂಡೆ ಸರಸವು ದ್ರೌಪದಿಗೆ<br>ಐದೆ ಲಜ್ಜೆಯ ಕಾಯಿದ್ಯೋ ॥ 5 ॥ | ತೊತ್ತಿನ ಮಗನ ಮನೆಯ ಕುಡುತೆ ಪಾಲನು ಸವಿದು<br>ಮತ್ತವಗೆ ಮುಕ್ತಿಯ ತೋರಿದೆಯೊ |
| ಗಣಿಕೆ ಗಂಡಕಿಯ ಅಗಣಿತ ಪಾಪವ ಕಳೆದು<br>ವೈಕುಂಠದಲ್ಲಿ ನಿಲ್ಲಿಸಿದ್ಯೋ ॥ 6 ॥ | ಐದು ಮಂದಿಯ ಕೂಡ ಸರಸವು ದ್ರೌಪದಿಗೆ<br>ಐದೆ ಲಜ್ಜೆಯ ಕಾಯ್ದೆಯೊ |

ತೊತ್ತಿನ ಮಗನ ಮನೆಯ ಕುಡುತೆ ಪಾಲನು ಸವಿದು
ವಿದುರನ ಶ್ಲಾಘ್ಯ ಮಾಡಿದ್ಯೋ    ॥ 7 ॥

ದೀನರುದ್ಧರಿಪ ಪುರಂದರ ವಿಠ್ಠಲ
ಏನು ಕಾರಣ ನನ್ನ ಮರೆತೆಯೊ

ಎಲ್ಲರನುದ್ಧರಿಸಿದ್ಯೋ ಪುರಂದರ ವಿಠ್ಠಲ ನೀ
ಯಾಕೆ ಎನ್ನನು ಮರೆತ್ಯೋ    ॥ 8 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಈ ಪದದಲ್ಲಿ ವಾಲ್ಮೀಕಿ, ಅಜಾಮಿಳ, ಕುಬ್ಜೆ, ಶಬರಿ, ದ್ರೌಪದಿ, ಗಂಡಕಿ ಮತ್ತು ವಿದುರ ಇವರನ್ನು ಹರಿಯು ಉದ್ಧರಿಸಿದ್ದು ಉಲ್ಲೇಖಕ್ಕೆ ಬಂದಿದೆ.

**ಮನಕೆ ಬರು** = ಮನಸ್ಸಿಗೆ ಒಪ್ಪಿಗೆಯಾಗು

**ವಾಲ್ಮೀಕಿ** = ಈತನು ಪ್ರಚೇತಸ ಋಷಿಯ ಮಗನಾಗಿದ್ದರೂ, ಬೇಡರ ಸಂಗದಲ್ಲಿ ಬೆಳೆದು ದಾರಿಯನ್ನು ಬಡಿಯುವವನಾಗಿದ್ದ. ಒಮ್ಮೆ ಸಪ್ತರ್ಷಿಗಳನ್ನು ಕಂಡು ಅವರಿಂದ ಜ್ಞಾನ ಪಡೆದು, ಬ್ರಹ್ಮರ್ಷಿಯಾಗಿ ರಾಮಾಯಣವನ್ನು ಬರೆದ.

**ಕುಬುಜೆ** = ಕಂಸನ ದಾಸಿ. ಇವಳು ಗಂಧದ ಉಳಿಗದವಳು. ಬಲರಾಮ ಕೃಷ್ಣರು ಬಿಲ್ಲು ಹಬ್ಬಕ್ಕೆಂದು ಮಥುರೆಗೆ ಹೋದಾಗ ಇವಳು ಕಂಸನಿಗಾಗಿ ಒಯ್ಯುತ್ತಿದ್ದ ಗಂಧವನ್ನು ಅವರಿಬ್ಬರೂ ಲೇಪಿಸಿಕೊಂಡರು. ಶ್ರೀ ಕೃಷ್ಣನು ಅವಳನ್ನು ಅನುಗ್ರಹಿಸಿ ಬೆನ್ನಿನ ಗೂನನ್ನು ತಿದ್ದಿದನು.

**ತೊತ್ತಿನ ಮಗ** = ವಿದುರ

**ಐದೆ** = ಸುಮಂಗಲೆ

**ಐದು ಮಂದಿಯ ಕೂಡ ಸರಸವು ದ್ರೌಪದಿಗೆ :-** ಈ ಭಾಗದಲ್ಲಿ - ಶ್ಯಾಮಲಾ, ಶಚಿ, ಉಷಾ ಮತ್ತು ಪಾರ್ವತಿಯರು ಚತುರ್ಮುಖನಿಂದ ಶಾಪಗ್ರಸ್ತರಾಗಿ ಆ ಶಾಪವನ್ನು ಕಳೆದುಕೊಳ್ಳುವುದಕ್ಕೆ ವಾಯುದೇವರ ಪತ್ನಿಯಾದ ಭಾರತಿದೇವಿಯನ್ನು ಮೊರೆಹೊಕ್ಕು, ಅವಳಲ್ಲಿ ಅಂತರ್ಯಾಮಿಗಳಾಗಿ ದ್ರೌಪದಿ ರೂಪದಿಂದ ಅವತರಿಸಿದ ಕಥೆ ಹೇಳಲಾಗಿದೆ.

**Classification:** Keerthane
**Ankita:** purandara vittala
**Location:** Pandharapura, Maharastra.
**Category:** Panduranga Stuti, Bhakti
**Group Words:** panduranga, bhava, parvata, papa, Valmiki, ajamila, Dhruva, vidura, shabari, mukti, draupadi, pankaja,

**Pravachana:** NA

**Explanation:** NA